ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡಪ್ರಭ    ದಿನಾಂಕ : DATE : 16/04/2019

# ದೇವೇಗೌಡರನ್ನು ಎಚ್‌ಡಿಕೆ ಮನೆಯಿಂದ ಹೊರಗಾಕಿದ್ರು

16/4/19

• **ಕನ್ನಡಪ್ರಭ ವಾರ್ತೆ** ತುಮಕೂರು

'ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ತಮ್ಮ ತಂದೆ ದೇವೇಗೌಡರನ್ನು ಮನೆಯಿಂದ ಹೊರಗೆ ಅಟ್ಟಿದ್ದರು. ಆ ಸಮಯದಲ್ಲಿ ನಾವು ದೇವೇಗೌಡರಿಗೆ ಊಟ ತೆಗೆದುಕೊಂಡು ಹೋಗಿ ಕೊಟ್ಟಿದ್ದೇವೆ' ಎಂದು ಚಿಕ್ಕನಾಯಕನಹಳ್ಳಿ ಶಾಸಕ ಜೆ.ಸಿ. ಮಾಧುಸ್ವಾಮಿ ಹೇಳಿರುವ ವಿಡಿಯೋ ಇದೀಗ ಭಾರೀ ವೈರಲ್ ಆಗಿದೆ.



ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ ಇತ್ತೀಚೆಗೆ ನಡೆದ ಬಿಜೆಪಿಯ ಚುನಾವಣಾ ಪ್ರಚಾರ ಸಭೆಯೊಂದರಲ್ಲಿ ಮಾಧುಸ್ವಾಮಿ ಈ ರೀತಿ ಹೇಳಿದ್ದು, ದೇವೇಗೌಡರ ಬಗ್ಗೆ ಹೇಳಿರುವ ಮಾತುಗಳು ಇದೀಗ ದೊಡ್ಡ ಚರ್ಚೆಯನ್ನೇ ಹುಟ್ಟು ಹಾಕಿದೆ.

**ವಿಡಿಯೋದಲ್ಲಿ ಏನಿದೆ?:** 'ದೇವೇಗೌಡರು ಬೆಂಗಳೂರಿನ ಹಳೇ ವಿದ್ಯಾರ್ಥಿ ಭವನದ ಸ್ಟೇಷನ್ ಎದುರು ಭಾಷಣ ಮಾಡುವ ವೇಳೆ ಜನರು ಕಲ್ಲನ್ನು ಎಸೆದರು. ಈ ವೇಳೆ ನಾನು ಎದೆಕೊಟ್ಟಿದ್ದೆ. ಆಗ ದೇವೇಗೌಡರು ನನ್ನನ್ನು ತಬ್ಬಿಕೊಂಡು ಅತ್ತಿದ್ದರು. ನನ್ನ ಮಕ್ಕಳು ಇದ್ದಿದ್ದರೂ ಈ ರೀತಿ ಏಟು ತಿಂದು ನನ್ನನ್ನು ಕಾಪಾಡುತ್ತಿರಲಿಲ್ಲ ಎಂದಿದ್ದರು. ಅಂತಹ ದೇವೇಗೌಡರನ್ನು ಕುಮಾರಸ್ವಾಮಿ ಒದ್ದು ಆಚೆಗೆ ಹಾಕಿದ್ದರು. ನಂತರ ಕುಮಾರ ಪಾರ್ಕ್‌ನ ಸಣ್ಣ ಕ್ವಾರ್ಟರ್ಸ್‌ನಲ್ಲಿ ವಾಸ ಮಾಡುತ್ತಿದ್ದರು. ಅಂತಹ ಸಂದರ್ಭದಲ್ಲಿ ನಾವು ದೇವೇಗೌಡರಿಗೆ ಟಿಫನ್ ಕ್ಯಾರಿಯರ್‌ನಲ್ಲಿ ಊಟ ತೆಗೆದುಕೊಂಡು ಹೋಗಿ ಕೊಟ್ಟಿದ್ದೇವೆ. ಅವರ ಮಕ್ಕಳು ಕೊಟ್ಟಿಲ್ಲ. ಬೆನ್ನು ತಿಕ್ಕಿದ್ದ ವಿ.ಎಸ್.ಉಗ್ರಪ್ಪ ಯಾಕೆ ಆಚೆಗೆ ಹೋದರು? ಮಾನಸ ಪುತ್ರ ಬಿ.ಎಲ್.ಶಂಕರ್ ಯಾಕೆ ಆಚೆ ಹೋದರು? ಬೆಳಗ್ಗೆ - ಸಾಯಂಕಾಲವೆನ್ನದೆ ಜೋಡಿಯಾಗಿದ್ದ ಸಿಂಧ್ಯಾ ಯಾಕೆ ಆಚೆಗೆ ಹೋದರು? ಈಗ ಕುಮಾರಸ್ವಾಮಿ ನನ್ನ ಬಳಿ ಬರಲಿ, ಯಾಕಪ್ಪ ಅವತ್ತು ನಿಮ್ಮ ಅಪ್ಪನನ್ನು ಮನೆಯಿಂದ ಹೊರಗೆ ಹಾಕಿದ್ದೆ ಅಂತ ಕೇಳುತ್ತೇನೆ' ಎಂದಿದ್ದಾರೆ ಮಾಧುಸ್ವಾಮಿ.

## ಮಾಧುಸ್ವಾಮಿ ಮೇಲೆ ಎಫ್‌ಐಆರ್

ಕ.ಪ್ರ 16/4/19

ತುಮಕೂರು: ಚಿಕ್ಕನಾಯಕನಹಳ್ಳಿ ತಾಲೂಕು ತಮ್ಮಡಿಹಳ್ಳಿ ಗೊಲ್ಲರಹಟ್ಟಿಯಲ್ಲಿ ವ್ಯಕ್ತಿಯೊಬ್ಬರ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ಚಿಕ್ಕನಾಯಕನಹಳ್ಳಿ ಶಾಸಕ ಜೆ.ಸಿ. ಮಾಧುಸ್ವಾಮಿ ಮೇಲೆ ಎಫ್‌ಐಆರ್ ದಾಖಲಾಗಿದೆ. ಶುಕ್ರವಾರ ರಾತ್ರಿ ಪ್ರಚಾರಕ್ಕೆಂದು ತೆರಳಿದ್ದ ವೇಳೆ ಚಂದ್ರು ಎಂಬ ವ್ಯಕ್ತಿ ಅಭಿವೃದ್ಧಿ ವಿಚಾರವಾಗಿ ಮಾಧುಸ್ವಾಮಿ ಅವರನ್ನು ಪ್ರಶ್ನಿಸಿದ್ದ. ಆ ಸಂದರ್ಭದಲ್ಲಿ ಸಿಟ್ಟಾಗಿದ್ದ ಮಾಧುಸ್ವಾಮಿ, ಆತನ ಮೇಲೆ ಕೈ ಎತ್ತಿದ್ದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ಈ ಹಿನ್ನೆಲೆಯಲ್ಲಿ ಚುನಾವಣಾ ಅಧಿಕಾರಿಗಳು ಸ್ವಯಂ ಪ್ರೇರಣೆಯಿಂದ ನ್ಯಾಯಾಲಯದ ಅನುಮತಿ ಪಡೆದು ಪ್ರಕರಣ ದಾಖಲಿಸಿಕೊಂಡಿದ್ದರು.